Sandal Koti Building in Chikmagalur.

Q.—631. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state :—

(*a*) whether it has come to their notice that the Sandal Koti building in Chikmagalur has not yet been handed over to the P.W.D. ;

(*b*) when it was ordered to be handed over to the P.W.D., and the reason as to why the same has not yet been handed over for accommodating the Intermediate College at Chikmagalur ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) (i) On 18th November 1952.

(ii) The District Board has not yet handed over the place where they have their present nursery to the Forest Department to transfer the Sandal Koti to that place and thereby enable the University to occupy the entire premises of the present Sandal Koti for the purposes of, Intermediate College.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕಟ್ಟಡವನ್ನು ಬಿಟ್ಟು ಕೊಡುವಂತೆ ಸರ್ಕಾರಿ ಆಜ್ಞೆ ಹೊರಡಿಸಿದನಂತರವೂ ಸಹ ಆ ಕಟ್ಟಡವನ್ನು ಅವರು ಇನ್ನೂ ಬಿಟ್ಟುಕೊಡದಿರುವ ಕಾರಣ ಅದನ್ನು ಬಿಡಿಸಿಕೊಡಲು ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಕೈಗೊಂಡಿರುತ್ತೀರಿ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಈ ಕೆಲಸವನ್ನು ಒಂದು ಸೌಹಾರ್ದ ವಾತಾವರಣದಲ್ಲಿ ನಡೆಸಬೇಕೆಂದು ಪ್ರಯತ್ನ ಮಾಡಲಾಗುತ್ತಿದೆ. ಆ ಜಿಲ್ಲಾ ಬೋರ್ಡಿನವರಿಗೆ ವಿಚಾರವನ್ನು ನಾವು ತಿಳಿಸಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಜಿಲ್ಲಾಬೋರ್ಡುಗಳಿಗೆ ಈಗ ಡೆಪ್ಯುಟಿ ಕಮಿಷನರ್‌ಗಳು ಛೇರ್ಮನ್ನರಾಗಿದ್ದಾರಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದರೆ ಮುಂದೆ ಯಾವ ತಕರಾರುಗಳೂ ಬಾರದಿರುವಂತೆ ಈ ಕೆಲಸ ನಡೆಸಬೇಕಾಗಿರುವುದರಿಂದ ಅವರ ಸಹಕಾರಪಡೆದು ಕೊಂಡು ಇದನ್ನು ಮಾಡುವುದು ಉತ್ತಮವೆಂದು ಭಾವಿಸಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ತಾವು ಈ ಬಗ್ಗೆ ಆರ್ಡರನ್ನು ಹೊರಡಿಸುವ ಮುನ್ನ ಆ ಜಿಲ್ಲಾಬೋರ್ಡಿನವರೊಡನೆ ಸಮಾಲೋಚನೆ ಮಾಡಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರೂ ಸಹ ಇದ್ದರೆಂದು ನನಗೆ ಜ್ಞಾಪಕವಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಆಗ ತಾವು ಅವರನ್ನು ಒತ್ತಾಯಮಾಡಿದಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಒತ್ತಾಯಪಡಿಸಲು ನಮಗೆ ಇಷ್ಟವಿಲ್ಲ. ಅಂತೂ ವಿಚಾರವನ್ನು ಅವರಿಗೆ ಸಾಕಷ್ಟು ತಿಳಿಸಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ದಿವಸ ಅವರು ಆ ಕಟ್ಟಡವನ್ನು ಏತಕ್ಕೆ ಬಿಟ್ಟುಕೊಡುತ್ತಿಲ್ಲ ಎಂಬುದನ್ನು ಕೇಳಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೇಳಿದ್ದೇವೆ. ಅದು ಆ ನಂದಲ್‌ಕೋಠಿಗೆ ಬೇಕಾಗಿದೆ ಎಂಬುದಾಗಿ ಅವರು ತಿಳಿಸುತ್ತಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಸರ್ಕಾರ ತನ್ನ ಹುಕುಮನ್ನು ಹೊರಡಿಸುವ ಮೊದಲೇ ಈ ಅಂಶಗಳನ್ನೆಲ್ಲಾ ವಿವರವಾಗಿ ಪರಿಶೀಲನೆ ಮಾಡಬೇಕಾಗಿತ್ತಲ್ಲವೇ ?

Sri A. G. RAMACHANDRA RAO.—I have already submitted that my recollection is that the District Board President was present.

ಶ್ರೀ ಜಿ. ಪುಟ್ಟಸ್ವಾಮಿ.—ಹೀಗೆ ಒಂದು ಗೌರ್ಮೆಂಟ್ ಆರ್ಡರ್ ಆದನಂತರ ಅದನ್ನು ಜಾರಿಗೆ ತರದಿದ್ದರೆ ಆ ಆರ್ಡರಿಗೇನಾದರೂ ಘನತೆ ಉಳಿಯುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದಷ್ಟೂ ಒಂದು ಉತ್ತಮ ಮಾರ್ಗದಲ್ಲಿ ಸೌಹಾರ್ದಯುತವಾದ ರೀತಿಯಲ್ಲಿ ಅವರನ್ನು ಒಪ್ಪಿಸಿಕೊಂಡು ಈ ವಿಚಾರವನ್ನು ಮುಂದುವರಿಸೋಣ ಎಂಬುದಾಗಿ ತೀರ್ಮಾನ ಮಾಡಿಕೊಂಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗಲಾದರೂ ಜಾಗ್ರತೆ ತಾವು ಅವರಿಗೆ ಒತ್ತಾಯ ಪಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಾವು ಅವರಿಗೆ ಒತ್ತಾಯಮಾಡಿ ಅವರನ್ನು ಒಲಿಸಿಕೊಂಡರೆ ಆಗ ಈ ಕಾರ್ಯ ಬೇಗ ಆಗಬಹುದು.

Harijans of Amuchavadi Village, Chamarajanagar Taluk (Grant of Sites).

Q.—542. Sri U. M. MADAPPA (Chamarajanagar).—

Will the Government be pleased to state :—

(*a*) when the Harijans of Amuchavadi village, Chamarajanagar Taluk, had requested for the acquisition of a suitable place for construction of dwelling quarters to them ;

(*b*) the reasons for not acquiring any place so far for this purpose ;

(*c*) the facilities that could be given to the Harijans in the matter ?

A.—Sri T. CHANNIAH (Minister for Public Health and Local Self-Government).—

(*a*) On 25th September 1948.

(*b*) On the report that there were 13 vacant sites in the Adikarnataka hatti itself which could be built upon, the Sub-Division Officer ordered in March 1954 that the acquisition records might be kept by until all the vacant sites which were available in the Adikarnataka hatti were built up and that proposals for acquisition of agricultural land might be renewed at proper time.

(*c*) It is since ascertained that there is need for providing house building sites for about 40 Harijan families in the village and that acquisition of suitable agricultural land is necessary for the purpose. The Sub-Division Officer has been instructed to send up proposals for the acquisition of 2 acres of land in the western portion of Survey No. 195. The acquisition charges will be met out of the Depressed Class Amelioration grants and the sites formed will be allotted to the needy Harijans free of charge. Building materials and money grants will also be given in deserving cases.

ಶ್ರೀ ಯು. ಎಂ. ಮಾದಪ್ಪ.—ಈ ಎರಡು ಎಕರೆ ಜಮೀನಿಗೋಸ್ಕರವಾಗಿಯೇ ಅವರು ಈ ಸರ್ವೆ ನಂಬರನ್ನು ಅಕ್ವಯಿರ್ ಮಾಡಿಕೊಳ್ಳಬೇಕೆಂದು ತಮ್ಮನ್ನು ಕೇಳಿರುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಯು. ಎಂ. ಮಾದಪ್ಪ.—ಇದನ್ನು ಜಾಗ್ರತೆ ಅವರಿಗೆ ದೊರೆಯುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಮಾಡುತ್ತೇವೆ. ಆದರೆ ಈಗ ಗಾವಠಾಣದಲ್ಲೇ ಇನ್ನೂ 13 ಖಾಲೀ ನಿವೇಶನಗಳಿರುತ್ತವೆ. ಈ ಸರ್ವೆ ನಂಬರನ್ನು 38 ಸಂಸಾರಗಳಿಗೋಸ್ಕರವಾಗಿ ಅಕ್ವಯಿರ್ ಮಾಡಿಕೊಳ್ಳಲಾಗಿದೆ. ಈ ಎರಡು ಎಕರೆ ಜಮೀನನ್ನು ಅವರಿಗೆ ಆ ಬಾಕಿ 13 ಸೈಟುರತಕ್ಕ ಜನರು ಕಟ್ಟಡಕಟ್ಟಿಕೊಂಡು ತಕ್ಷಣವೇ ಇದನ್ನು ಇವರಿಗೆ ಬಿಡಿಸಿಕೊಡಲಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಹಾಗೆ ಆ 13 ಸೈಟುಗಳಲ್ಲಿ ಅವರು ಮನೆ ಕಟ್ಟಿಕೊಳ್ಳದಿದ್ದರೆ ಆಗ ತಮಗೆ ಈ ಸರ್ವೆ ನಂಬರಿನಲ್ಲಿ ಈ ಎರಡು ಎಕ್ರೆ ಭೂಮಿಯನ್ನು ಅಕ್ವಯಿರ್ ಮಾಡಿಕೊಳ್ಳಲು ಆಗುವುದಿಲ್ಲವಂತಲೇನು?

ಶ್ರೀ ಟಿ. ಚನ್ನಯ್ಯ.—ಆ ರೀತಿ ಹೇಳಲಾಗಿದೆ.

ಶ್ರೀ ಯು. ಎಂ. ಮಾದಪ್ಪ.—ಆ 13 ಸಂಸಾರ ಬಿಟ್ಟು ಉಳಿದ ಜನರಿಗೇನು ಮಾಡುತ್ತೀರಿ?

ಶ್ರೀ ಟಿ. ಚನ್ನಯ್ಯ.—ಈ ಎರಡು ಎಕರೆ ಭೂಮಿ ಅಕ್ವಯಿರ್ ಮಾಡಲಾಗಿದೆ.

ಶ್ರೀ ಯು. ಎಂ. ಮಾದಪ್ಪ.—ಈ ಬಗ್ಗೆ ಸರ್ಕಾರದವರು ಈ ರೀತಿಯಾಗಿ ಮಾಡಲು ತಿಳಿವಳಿಕೆ ಕೊಟ್ಟಿದ್ದಾರೋ ಅಥವಾ ಈ ರೀತಿ ಮಾಡಲಾಗಿದೆ ಎಂದು ಸರ್ಕಾರಕ್ಕೆ ವರದಿ ಬಂದಿದೆಯೋ?

ಶ್ರೀ ಟಿ. ಚನ್ನಯ್ಯ.—ಈ ರೀತಿ ಮಾಡಿದ್ದೇವೆಂದು ನಮಗೆ ವರದಿ ಬಂದಿದೆ.

New Roads in Channapatna Taluk.

Q.—239. Sri V. VENKATAPPA (Channapatna).—

Will the Government be pleased to state :—

(*a*) whether it is not a fact that the Local Self-Government Minister in his reply to a question in this House last year gave a reply stating that Rs. 50,000 was sanctioned for roads in Channapatna Taluk and that four roads would be taken up in Channapatna Taluk;

(*b*) what are those roads and whether the work has been taken up; if not, why not?

A.—Sri T. CHANNIAH (Minister for Public Health and Local Self-Government).—

(*a*) Yes.

(*b*)—

1. Santhemogenahalli to Sogala
2. Chickamalur to Malurpatna
3. Belakere to Madapura
4. Dasawara to Makali

It is being taken up.

ಶ್ರೀ ವಿ. ವೆಂಕಟಪ್ಪ.—ಕೆಲಸವನ್ನು ಕೈಗೊಳ್ಳಲಾಗಿದೆಯೇ ಎಂದು ಕೇಳಿದುದಕ್ಕೆ, ಕೈಗೊಳ್ಳಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ . . . .

ಅಧ್ಯಕ್ಷರು.—ಇಂಗ್ಲಿಷ್ ಪ್ರಶ್ನೋತ್ತರದಲ್ಲಿ "is being taken up" ಎಂದು ತಿಳಿಸಿರುವುದು ಸರಿಯಾಗಿದೆ.

ಶ್ರೀ ಟಿ. ಚನ್ನಯ್ಯ.—ಆ ಕೆಲಸವನ್ನು ಇನ್ನೂ ಕೈಗೊಂಡಿಲ್ಲ. ಕೈಗೊಳ್ಳಲಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ಇದನ್ನು ಮುಂಜೂರು ಮಾಡಿ ಎಷ್ಟು ವರ್ಷಗಳಾದವು?

ಶ್ರೀ ಟಿ. ಚನ್ನಯ್ಯ.. 27ನೇ ಆಗಸ್ಟ್ 1955ರಲ್ಲಿ ಮುಂಜೂರಾಗಿದೆ.

ಶ್ರೀ ವಿ. ವೆಂಕಟಪ್ಪ.—ಈ ಸಂತೇ ಮೊಗೇನಹಳ್ಳಿ-ಸೋಗಾಲದ ವರೆಗಿನ ರಸ್ತೆ ಈಗ ಆಗಿದೆಯೇ ಅಥವಾ ಈಗ ಇದನ್ನು ಇನ್ನೂ ಹೊಸದಾಗಿ ಪ್ರಾರಂಭಿಸ ಬೇಕಾಗಿದೆಯೋ?

ಶ್ರೀ ಟಿ. ಚನ್ನಯ್ಯ.—ಅಲ್ಲೇನು ಈಗಾಗಲೇ ಒಂದು ರಸ್ತೆ ಇಹೆಯೋ ಅಥವಾ ಇಲ್ಲವೊ ಅಥವಾ ಈಗೊಂದು ಹೊಸ ರಸ್ತೆ ಆಗಬೇಕಾಗಿದೆಯೋ ಅದನ್ನು ನಾನು ಈಗ ನೇರವಾಗಿ ತಿಳಿಸಲಾರೆ.